ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.1344/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲೋಕೇಶ್ ಎಸ್ | ಪಿ.ಡಬ್ಲ್ಯೂ.8 |
| ತಂದೆಯ ಹೆಸರು | : | ಶಿವಲಿಂಗಯ್ಯ | ಸಿ.ಡಬ್ಲ್ಯೂ.11 |
| ವಯಸ್ಸು | : | 55 ವರ್ಷ | |
| ವೃತ್ತಿ | : | ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಮಗಳೂರು | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 09-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ಚಿಕ್ಕಮಗಳೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ20.07.2021 ರಂದು ನಾನು ಕಾಲೇಜಿನ ಪ್ರಾಚಾರ್ಯನಾಗಿ ಕರ್ತವ್ಯ ನಿರ್ವಹಿಸಿದ್ದು ಆ ಸಮಯದಲ್ಲಿ ನಮ್ಮ ಕಾಲೇಜಿನ ಉಪನ್ಯಾಸಕರಾಗಿ ಕೆ. ಶ್ರೀನಿವಾಸ್ ನಾಯಕ್ ಇವರು ಕರ್ತವ್ಯದಲ್ಲಿ ಇದ್ದು, ನಗರ ಪೊಲೀಸ್ ಠಾಣೆಯಿಂದ ಗಾಂಜಾ ಪ್ರಕರಣಕ್ಕೆ ಸಂಬಂಧಪಟ್ಟು ಪತ್ರಾಂಕಿತ ಅಧಿಕಾರಿಯಾಗಿ ಸಾಕ್ಷಿಯಾಗಿ ಕಳುಹಿಸಬೇಕು ಎಂದು ದಿಃ13.07.2021 ಒಂದು ಮನವಿಯನ್ನು

ನೀಡಿದ್ದು ಆ ಪ್ರಕಾರ ನಾನು ಸದರಿ ಶ್ರೀನಿವಾಸ್ ನಾಯಕ್ ರನ್ನು ಪತ್ರಾಂಕಿತ ಅಧಿಕಾರಿಯಾಗಿ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-20(ಎ) ಇರುತ್ತದೆ. ನಾನು ಸದರಿ ಶ್ರೀನಿವಾಸ್ ನಾಯಕ್ ರವರು ಪತ್ರಾಂಕಿತ ಅಧಿಕಾರಿ ಎನ್ನುವ ಬಗ್ಗೆ ದಿಃ20.07.2021 ರಂದು ದೃಢೀಕರಣ ಪತ್ರ ನೀಡಿದ್ದು ಸದರಿ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-21(ಎ) ಇರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಚಾಸಾ-2 ಶ್ರೀನಿವಾಸ್ ನಾಯಕ್ ರವರನ್ನೇ ಪತ್ರಾಂಕಿತ ಅಧಿಕಾರಿಯನ್ನಾಗಿ ಕಳುಹಿಸಿ ಎಂದು ನಿರ್ದಿಷ್ಟವಾಗಿ ಮನವಿ ಇರಲಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಆದರೆ ಒಬ್ಬರು ಪತ್ರಾಂಕಿತ ಅಧಿಕಾರಿಯನ್ನು ಸಾಕ್ಷಿಯನ್ನಾಗಿ ಕಳುಹಿಸಿಕೊಡುವಂತೆ ಕೋರಲಾಗಿತ್ತು. ನಿಪಿ-20 ರಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಿದ ಶ್ರೀನಿವಾಸ್ ನಾಯಕ್ ರವರು ಪತ್ರಾಂಕಿತ ಅಧಿಕಾರಿ ಎನ್ನುವ ಬಗ್ಗೆ ದೃಢೀಕರಣ ಪತ್ರವನ್ನು ಕೋರಿ ನೀಡಲಾದ ದಾಖಲೆ ಎಂದರೆ ಸರಿ. ನಿಪಿ-21 ಸದರಿ ಶ್ರೀನಿವಾಸ್ ನಾಯಕ್ ರವರು ಪತ್ರಾಂಕಿತ ಅಧಿಕಾರಿ ಎಂದು ನಾನು ದೃಢೀಕರಿಸಿ ನೀಡಿದ ದಾಖಲೆ ಎಂದರೆ ಸರಿ. ಸದರಿ ಶ್ರೀನಿವಾಸ್ ನಾಯಕ್ ರವರನ್ನು ಪತ್ರಾಂಕಿತ ಅಧಿಕಾರಿಯನ್ನಾಗಿ ನಾನು ಮೌಖಿಕವಾಗಿ ಆದೇಶಿಸಿ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಶ್ರೀನಿವಾಸ್ ನಾಯಕ್ ರವರು ನಮ್ಮ ಕಾಲೇಜಿನಲ್ಲಿ ಸದರಿ ದಿನ ಕರ್ತವ್ಯದಲ್ಲಿ ಇದ್ದರು ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ. ನನಗೆ ಪೊಲೀಸ್ ಠಾಣೆಯಿಂದ ಯಾವುದೇ ಮನವಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್‌ಃ